ಸ್ಥಗಿತಗೊಳಿಸಬೇಕು. ಅನೇಕ ತರುಣ ಉತ್ಸಾಹಿಗಳು ಸಣ್ಣ ಕೈಗಾರಿಕೆಗಳನ್ನು ಮಾಡಲು ಮುಂದೆ ಬಂದಿದ್ದು ಅವರಿಗೆಲ್ಲಾ ನಿರಾಶೆಯಾಗಿದೆ. ಕಾರ್ಖಾನೆಗಳನ್ನು ಪ್ರಾರಂಭ ಮಾಡುವ ಹೊತ್ತಿಗೇ ಅವರ ಶಕ್ತಿ ಎಲ್ಲಾ ಹೋಗಿರುತ್ತದೆ. ಅದರ ಜೊತೆಗೆ ಉತ್ಪತ್ತಿ ಮಾಡಿದ ಮೇಲೆ ಮಾರಾಟ ಮಾಡುವಾಗ ಈ ತರಹ ಮಾಡಿದರೆ ತುಂಬಾ ತೊಂದರೆಯಾಗುತ್ತದೆ. ಆದ್ದರಿಂದ ಸಣ್ಣ ಕೈಗಾರಿಕೋದ್ಯಮಿಗಳ ಹಿತ ರಕ್ಷಣೆ ಮಾಡಬೇಕೆಂದು ತಮ್ಮ ಮೂಲಕ ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.— ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿದ ರೀತಿಯಲ್ಲಿ ಆ ಆಜ್ಞೆಯಿಂದ ಸಣ್ಣ ಕೈಗಾರಿಕೆಗಳಿಗೆ ತೊಂದರೆಯಾಗುವುದಿಲ್ಲ. ಟೆಂಡರ್‌ನ್ನು 5 ಲಕ್ಷ, 10 ಲಕ್ಷ ಮತ್ತು 30 ಲಕ್ಷ ರೂಪಾಯಿಗಳಿಗೆ ಹಾಕುವಾಗ ಹೆಚ್ಚು ಹಣವನ್ನು ಕೊಡಬೇಕಾಗುತ್ತದೆ. ಬರೀ 100 ರೂಪಾಯಿಕೊಟ್ಟು 3 ಲಕ್ಷ ರೂಪಾಯಿಗೆ ಟೆಂಡರ್ ಹಾಕಿದರೆ ಸರ್ಕಾರಕ್ಕೆ ಆದಾಯ ಬರುವುದಿಲ್ಲ. ಹಾಗೂ ಸಣ್ಣ ಕೈಗಾರಿಕೆಯವರು ಏನು ಮನವಿ ಕೊಟ್ಟಿದ್ದಾರೆ ಅದನ್ನು ಪರಿಶೀಲನೆ ಮಾಡುತ್ತಿದ್ದೇವೆ.

(xii) ವಿಷಯ : ಸರಕಾರದ ಮೂರು ಮತ್ತು ನಾಲ್ಕನೇ ದರ್ಜೆ ನೌಕರರಿಗೆ ಕನ್ನಡ ಭಾಷಾ ಪರೀಕ್ಷೆಯನ್ನು ಕಡ್ಡಾಯಗೊಳಿಸುವ ವಿಚಾರ.

ಶ್ರೀ ಎಂ.ಎಸ್. ಕೃಷ್ಣನ್.—ಅಧ್ಯಕ್ಷರೇ, 3 ಮತ್ತು 4ನೇ ದರ್ಜೆ ಸರ್ಕಾರಿ ನೌಕರರಿಗೆ ಅದರಲ್ಲೂ ಅಲ್ಪಸಂಖ್ಯಾತರಿಗೆ ಕನ್ನಡ ಭಾಷೆ ಕಲಿಯಲು ಅನುಕೂಲವಾಗಲಿ ಎಂದು ಹೇಳಿ 1 ವರ್ಷ ಪ್ರೊಬೆಷನರಿ ಪೀರಿಯಡ್ ಇರಬೇಕೆಂದು ಆಜ್ಞೆ ಹೊರಡಿಸಿದ್ದರು. ಆದರೆ ಅದನ್ನು ಬದಲಾವಣೆ ಮಾಡುತ್ತೇವೆನ್ನುವ ಅಭಿಪ್ರಾಯ ಪತ್ರಿಕೆಗಳಲ್ಲಿ ಬಂದಿದೆ. ಈ ವಿಷಯವನ್ನು ನಾನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತೇನೆ ಮುಂಜಾನೆ ಪತ್ರಿಕೆಯಲ್ಲಿ ಈ ವಿಷಯ ಪ್ರಕಟವಾಗಿದೆ. ನಿನ್ನೆಯ ದಿವಸ ಕ್ರಿಯಾ ಸಮಿತಿಯವರು, ಕಲಾವಿದರು ಸೇರಿ ಮಾನ್ಯ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿದ್ದರೆಂದು ವರದಿಯಾಗಿದೆ. 3 ಹಾಗೂ 4ನೇ ದರ್ಜೆ ನೌಕರರ ಬಗ್ಗೆ ರಕ್ಷಣೆ ಕೊಡುವ, ಕಾಳಜಿ ಇಡುವ ಸರ್ಕಾರ ಈಗ ಆ ಆಜ್ಞೆ ಮಾರ್ಪಾಡು ಮಾಡುವುದಾದರೆ ಇದರಿಂದ ಅವರಿಗೆ ಎಷ್ಟು ಅನುಕೂಲ ಆಗುತ್ತದೆ ಎಷ್ಟು ಅನಾನುಕೂಲವಾಗುತ್ತದೆ ಎಂಬುದನ್ನು ಯೋಚನೆ ಮಾಡಬೇಕಾಗಿದೆ. ಬದಲಾವಣೆ ಮಾಡಿದ ಪ್ರಕಾರ ಅದೇನೋ 4 ತಿಂಗಳ ತರಬೇತಿ ಕೊಟ್ಟು ಬೇರೆ ರೀತಿಯ ಒಂದು ಪರೀಕ್ಷೆಯನ್ನು ಮಾಡಬೇಕೆಂದು ಹೇಳಲಾಗಿದೆ. ಇನ್ನು ಕೆಲಸಕ್ಕೆ ನೇಮಿಸಿಕೊಳ್ಳುವ ಬಗ್ಗೆ ಹಿಂದಿನ ಆಜ್ಞೆಯನ್ನು ಬದಲಾವಣೆ ಮಾಡಿದ್ದೇವೆಂದು ಹೇಳಿದ್ದಾರೆ. ಯಾವ ರೀತಿಯ ಬದಲಾವಣೆಯನ್ನು ಮಾಡಿದ್ದಾರೆ? ಮತ್ತು ಸಂಸ್ಕೃತದ ಬಗ್ಗೆ ಸುಪ್ರೀಮ್ ಕೋರ್ಟಿಗೆ ಹೋಗುವುದಕ್ಕೆ ಒಪ್ಪಿಕೊಂಡಿದ್ದಾರೆಂದು ಪತ್ರಿಕೆಯಲ್ಲಿ ಬಂದಿದೆ ಈ ವಿಷಯದ ಬಗ್ಗೆ ಯಾವ ರೀತಿ ತೀರ್ಮಾನ ಮಾಡಿಕೊಂಡಿದ್ದೀರಿ? ಕನ್ನಡದ ಬಗ್ಗೆ ರಾಜಕುಮಾರ್ ಅಭಿಮಾನಿಗಳು ಚಳುವಳಿ ಮಾಡಿದರು. ಈ ಒಂದು ವಿಷಯದ ಬಗ್ಗೆ ಚರ್ಚೆ ಮಾಡಿ ಯಾವ ಅಭಿಪ್ರಾಯಕ್ಕೆ ಬಂದಿದ್ದೀರಿ? ಈಗ ನೀವು ಬಂದಿರತಕ್ಕಂತಹ ನಿರ್ಧಾರ ಸ್ವಂತದ್ದೇ ಅಥವಾ ಸರ್ಕಾರದ್ದೇ? ಯಾರು ಅಲ್ಪಸಂಖ್ಯಾತರು ಇದ್ದಾರೆ ಅವರಿಗೆ ನೀವು ರಕ್ಷಣೆ ಕೊಡುವುದಿಲ್ಲವೇ? ಇದನ್ನೆಲ್ಲಾ ಮಾನ್ಯ ಮುಖ್ಯ ಮಂತ್ರಿಗಳು ಹೇಳಬೇಕಾಗುತ್ತದೆ.

ಶ್ರೀ ರಾಮಕೃಷ್ಣ ಹೆಗಡೆ. — ಮಾನ್ಯ ಅಧ್ಯಕ್ಷರೇ, ನಿನ್ನೆಯ ದಿವಸ ಕನ್ನಡ ಸಾಹಿತಿಗಳು ಮತ್ತು ಕಲಾವಿದರ ಬಳಗದ ಸುಮಾರು 12-13 ಜನ ಸ್ನೇಹಿತರು ನನ್ನನ್ನು ಭೇಟಿಯಾಗಿದ್ದರು. ಹಿಂದಿನ ದಿವಸ ಅವರ ಕಮಿಟಿ ಮೀಟ್ ಮಾಡಿತ್ತು. ಮತ್ತು 3 ಹಾಗೂ 4ನೇ ದರ್ಜೆ ನೌಕರರಿಗೆ ಕನ್ನಡ ಕಡ್ಡಾಯ ಮಾಡತಕ್ಕ ವಿಷಯದಲ್ಲಿ ಚರ್ಚೆ ಮಾಡಿದರು ಎಂದು ಕಾಣುತ್ತದೆ ಅವರು ನನಗೆ ಒಂದು ಮನವಿಯನ್ನು ಕೊಟ್ಟರು. ಆ ಮನವಿಯಲ್ಲಿ ಮುಖ್ಯವಾಗಿ ಮೂರು ಬೇಡಿಕೆಗಳು ಇದ್ದವು. ಅದರಲ್ಲಿ ಮೊದಲನೆಯದಾಗಿ, ಬೆಂಗಳೂರಿನಲ್ಲಿ ಇರತಕ್ಕ ಕೇಂದ್ರ ಸರ್ಕಾರದ ಉದ್ಯಮಗಳು, ಕೇಂದ್ರ ಸರ್ಕಾರದ ಕಛೇರಿಗಳು ಎಂದರೆ ಅವುಗಳು ಬ್ಯಾಂಕುಗಳಾಗಿರಲಿ, ಕಾರ್ಖಾನೆಗಳಾಗಿರಲಿ ಅಥವಾ ಬೇರೆ ಯಾವುದೇ ಎಸ್ಟಾಬ್ಲಿಷ್‌ಮೆಂಟ್‌ಗಳಾಗಿರಲೀ, ಅವುಗಳಲ್ಲಿ ಕನ್ನಡಿಗರಿಗೆ ಎಷ್ಟು ಪ್ರಾತಿನಿಧ್ಯ ಸಿಕ್ಕಬೇಕೋ ಅಷ್ಟು ಸಿಕ್ಕದೇ ಇದ್ದರೆ ಏನು ಕ್ರಮ ತೆಗೆದುಕೊಳ್ಳಬೇಕೆನ್ನುವ ಬಗ್ಗೆ ನೀವು ಒಂದು ಕಮಿಟಿಯನ್ನು ನೇಮಕ ಮಾಡಿದಿರಿ, ಆ ಕಮಿಟಿ ಇನ್ನೂ ಕೆಲಸ ಮಾಡಲು ಪ್ರಯತ್ನವನ್ನೇ ಮಾಡಿಲ್ಲ, ಅದು ಕೆಲಸ ಮಾಡುವುದಕ್ಕೆ ಪ್ರಾರಂಭವಾಗಬೇಕೆಂದು ಹೇಳಿದ್ದಾರೆ. ಆ ವಿಚಾರದಲ್ಲಿ ನಾನು ಅವರಿಗೆ ನಾನು ಹೇಳಿದೆ, ಕಮಿಟಿಯನ್ನು ನಾವು ಪ್ರಾರಂಭ ಮಾಡಿ ಐದಾರು ತಿಂಗಳುಗಳಾದವು, ಆದರೆ ಆ ಕಮಿಟಿ ಇನ್ನೂ ಮೀಟ್ ಆಗಿಲ್ಲ. ಇದಕ್ಕೆ ಕಾರಣ ಆ ಒಂದು ಸಮಿತಿಗೆ ಒಬ್ಬ ಪಾರ್ಲಿಮೆಂಟ್ ಸದಸ್ಯರು ಅಧ್ಯಕ್ಷರು ಆಗಿರುವುದು ಒಳ್ಳೆಯದು ಎಂಬ ಒಂದು ಅಭಿಪ್ರಾಯ ಎಂದು. ಕೇಂದ್ರ ಸರ್ಕಾರದ ಉದ್ಯಮಗಳಿಗೆ ಸಂಬಂಧಪಟ್ಟ ಹಾಗೆ ಯಾವುದೇ ಒಂದು ಮಾಹಿತಿಯನ್ನು, ಈ ಸದನದ ಒಬ್ಬ ಸದಸ್ಯನಾಗಲೀ ಅಥವಾ ಬೇರೆ ಯಾರೇ ಪ್ರಭಾವಿ ಸದಸ್ಯರಾಗಿರಲೀ, ಅಥವಾ ಇನ್ನು ಯಾರೇ ಆಗಲಿ ಹೋಗಿ ಕೇಳಿದರೆ ಅದನ್ನು ನಿರಾಕರಿಸಬಹುದು. ಆದರೆ ಒಬ್ಬ ಎಂ.ಪಿ. ಅಧ್ಯಕ್ಷನಾಗಿ ಅದನ್ನು ಕೇಳತಕ್ಕ ಹಕ್ಕು ಅವರಿಗೆ ಇರುತ್ತದೆ.

ಮತ್ತು ಏನಾದರೂ ವಿಷಯಗಳು ಸಿಗದಿದ್ದರೆ ಅದನ್ನು ಕನ್‌ಸಲ್‌ಟೇಟಿವ್ ಕಮಿಟಿಯಲ್ಲಿ ಪ್ರಸ್ತಾಪ ಮಾಡಬಹುದು, ಹಾಗೂ ಪಾರ್ಲಿಮೆಂಟ್‌ನಲ್ಲಿ ಆ ಬಗ್ಗೆ ಪ್ರಶ್ನೆ ಹಾಕಬಹುದು. ಹಾಗೂ ಸಂಬಂಧಪಟ್ಟ ಮಂತ್ರಿಗಳನ್ನು ಭೇಟಿಯಾಗಿ ಕೇಳಬಹುದು. ಆದ್ದರಿಂದ ಪಾರ್ಲಿಮೆಂಟಿನ ಒಬ್ಬ ಸದಸ್ಯರು ಇದರ ಅಧ್ಯಕ್ಷರಾಗಿರಬೇಕೆಂದು ಅಭಿಪ್ರಾಯ ಇದೆ. ಈ ವಿಚಾರದಲ್ಲಿ ನಾನು ಶ್ರೀಮತಿ ಮಾರ್ಗರೇಟ್ ಆಳ್ವ ಅವರನ್ನು ಕೇಳಿದೆ. ಅವರು ಪ್ರಾರಂಭದಲ್ಲಿ ಆ ಬಗ್ಗೆ ಒಪ್ಪಿಕೊಂಡರು, ನಂತರ 1 ತಿಂಗಳು ಆದ ಮೇಲೆ ನಾನು ಆ ಸ್ಥಾನ ವಹಿಸುವುದಿಲ್ಲ ನನ್ನನ್ನು ಬಿಟ್ಟುಬಿಡಿ ಎಂದು ಹೇಳಿದರು. ಆ ಬಗ್ಗೆ ಕಾರಣ ಏನು ಎಂದು ಅವರಿಗೆ ಹೇಳಲಿಲ್ಲ. ಅದಾದ ಮೇಲೆ ನಾನು ಮಕ್ಸೂದ್ ಅಲಿ ಖಾನ್ ಅವರನ್ನು ಕೇಳಿದೆ. ಅವರು ರಾಜ್ಯ ಸಭಾ ಸದಸ್ಯರು. ಅವರೂ ಕೂಡಾ ಪ್ರಾರಂಭದಲ್ಲಿ ಒಪ್ಪಿಕೊಂಡರು. ಆ ನಂತರ ಸುಮಾರು ಒಂದು ತಿಂಗಳು ಆದ ಮೇಲೆ ಅವರೂ ಕೂಡಾ ಆ ಸ್ಥಾನವನ್ನು ವಹಿಸಿಕೊಳ್ಳಲು ನಿರಾಕರಿಸಿದರು. ಆದರೆ ಆ ಬಗ್ಗೆ ಕಾರಣವನ್ನು ಅವರು ನನಗೆ ಹೇಳಲಿಲ್ಲ. ಇಷ್ಟೆಲ್ಲಾ ಆಗುವ ಹೊತ್ತಿಗೆ 5 ತಿಂಗಳು ಮುಗಿದವು. ಆ ನಂತರ ಉಪಾಯವಿಲ್ಲದೇ ಡಾ. ಸರೋಜಿನಿ ಮಹಿಷಿಯವರನ್ನು ಕೇಳಿದೆ. ಅವರು ಇದಕ್ಕೆ ಒಪ್ಪಿಕೊಂಡರು. ಅವರಿಗೆ ಸಮಿತಿ ಸಭೆಯನ್ನು ಕರೆಯಲು ಮೊನ್ನೆ ತಾನೇ ಒಂದು ತಿಂಗಳ ಹಿಂದೆ ಹೇಳಿದ್ದೇನೆ. ಕಮಿಟಿ ಮೀಟಿಂಗ್ ಕರೆದು ನಿಮ್ಮ ಕೆಲಸವನ್ನು ಪ್ರಾರಂಭ ಮಾಡಿ ಎಂದು ಹೇಳಿದ್ದೇನೆ. ಆ ಕೆಲಸ ಪ್ರಾರಂಭವಾಗುತ್ತದೆಯೆಂದು ನಾನು ಅವರಿಗೆ ಹೇಳಿದೆ. ಇನ್ನು ಎರಡನೆಯದಾಗಿ ಮೊನ್ನೆ ತಾನೇ ಸಂಸ್ಕೃತದ ಸ್ಥಾನದ ಬಗ್ಗೆ ಹೈಕೋರ್ಟಿನಲ್ಲಿ ಏನು ನಿರ್ಣಯ ಮಾಡಿದ್ದಾರೆ ಅದರ ವಿರುದ್ಧ ಅಪೀಲ್ ಹೋಗಬೇಕೆಂದು, ಇದನ್ನು ಬಿಡಬಾರದೆಂದು ಅವರು ಹೇಳಿದರು. ಮಾನ್ಯ ಸದಸ್ಯರಿಗೆ ಗೊತ್ತಿರುವ ಹಾಗೆ ಇಬ್ಬರು ನ್ಯಾಯಾಧೀಶರು ಇರುವ ಡಿವಿಜನ್ ಬೆಂಚ್‌ನಲ್ಲಿ ತೀರ್ಮಾನ ಆಗಿದೆ. ಹಾಗೂ ಕೆಲವು ವಿಚಾರಗಳ ಬಗ್ಗೆ ಅವರಾಗಿಯೇ ಫುಲ್ ಬೆಂಚ್‌ಗೆ ರೆಫರ್ ಮಾಡಿರುತ್ತಾರೆ. ಈಗ ಫುಲ್ ಬೆಂಚ್‌ನ ನಿರ್ಣಯ ಬಂದ ಮೇಲೆ ಅದು ವಿಚಾರವಾಗಬೇಕಾಗುತ್ತದೆ. ಆಮೇಲೆ ಬೇಕಾಗಿದ್ದರೆ ಆ ವಿಚಾರದಲ್ಲಿ ಒಂದು ಅಂತಿಮವಾದ ನಿರ್ಣಯವಾಗಬೇಕಾಗುತ್ತದೆ. ಈಗ ಸುಪ್ರೀಮ್ ಕೋರ್ಟಿನ ತೀರ್ಮಾನ ಆಗುವವರೆಗೂ ಇದರ ಬಗ್ಗೆ ಜಿಜ್ಞಾಸೆ ನಡೆಯುತ್ತದೆ. ಇದು ಆಗುತ್ತದೆಯೋ ಇಲ್ಲವೋ ಎನ್ನುವ ಜಿಜ್ಞಾಸೆ ಇರುತ್ತದೆ. ಅದಕ್ಕಾಗಿ ಅಂತಿಮ ನಿರ್ಣಯ ಆಗಲೇ ಬೇಕು, ಕೊನೇ ನಿರ್ಣಯ ಆಗಲೇಬೇಕು ಎಂಬ ಅಭಿಪ್ರಾಯ ನಿಮ್ಮಲ್ಲಿ ಇದ್ದರೆ ನಾವು ಅಪೀಲ್ ಮಾಡುವುದಕ್ಕೆ ನಮ್ಮ ಅಭ್ಯಂತರ ಇಲ್ಲ ಎಂದು ಹೇಳಿದ್ದೇವೆ. ಈ ಬಗ್ಗೆ ನಮ್ಮ ಅಭ್ಯಂತರ ಇಲ್ಲವೆಂದು ಸ್ಪಷ್ಟವಾಗಿ ಹೇಳುತ್ತೇನೆ. ಇನ್ನು ಅವರ 3ನೇ ಬೇಡಿಕೆ ಎಂದರೆ ಸರ್ಕಾರದ 'ಸಿ' ಮತ್ತು 'ಡಿ' ದರ್ಜೆಯ ನೌಕರರಿಗೆ ಸಂಬಂಧಪಟ್ಟಿದ್ದು. ಮಾನ್ಯ ಸದಸ್ಯರು ನಿರ್ಣಯದಿಂದ ಅನೇಕರ ಹಿತಕ್ಕೆ ವಿರುದ್ಧವಾಗುತ್ತದೆ ಎಂದು ಹೇಳಿದರು. 'ಸಿ' ಮತ್ತು 'ಡಿ' ದರ್ಜೆಯ ನೌಕರರ ಬಗ್ಗೆ ನಾವು ಸ್ವಲ್ಪ ಯೋಚನೆ ಮಾಡೋಣ. 'ಡಿ' ದರ್ಜೆಯ ನೌಕರರು ಯಾರು? ಅವರ ಅರ್ಹತೆ ಏನು? ಈಗ ನಮ್ಮ ಕೈಗಾರಿಕಾ ಇಲಾಖೆ ಇದೆ. ಅದರಲ್ಲಿ ಆರ್ಟಿಜಾನ್ ಟ್ರೈನಿಂಗ್ ಸೆಂಟರ್ ಇದೆ. ಅಲ್ಲಿಗೆ ಒಬ್ಬ ಒಳ್ಳೆಯ ಬಡಗಿ ಎಂದರೆ ಕಾರ್ಪೆಂಟರ್ ಬೇಕಾಗುತ್ತದೆ. ಇಂತಹ ಕೆಲಸಕ್ಕೆ ಬರುವವನಿಗೆ ಕೆಲಸದಲ್ಲಿ ಅರ್ಹತೆ ಇರಬೇಕೇ ಹೊರತು ಅವನಲ್ಲಿ ಶೈಕ್ಷಣಿಕ ಅರ್ಹತೆ ಬೇಕಾಗಿಲ್ಲ. ಆತ 4ನೇ ತರಗತಿಯವರೆಗೆ ಓದಬೇಕಾಗಿಲ್ಲ. ಅಂತಹವನನ್ನು ನಾವು ಸರ್ಕಾರಿ ನೌಕರಿಗೆ ಸೇರಿಸಿಕೊಳ್ಳುತ್ತೇವೆ. ಅಂತಹವರಿಗೂ ಕೂಡಾ ಕನ್ನಡ ಕಡ್ಡಾಯ ಆಗಬೇಕು ಎಂದರೆ ಹೇಗೆ? ಅಂತಹವರಿಗೂ ಕನ್ನಡ ಪರೀಕ್ಷೆ ಆಗಬೇಕೆಂದು ಹೇಳಿದರೆ ಅದು ವ್ಯವಹಾರ ಅಲ್ಲವೆಂದು ನಾನು ಹೇಳಿದೆ. ಆಮೇಲೆ ಒಂದು ಸೂಚನೆಯನ್ನು ಮಾಡಿದರು. ಆಮೇಲೆ ಸಾಕಷ್ಟು ಚರ್ಚೆಯಾದ ಮೇಲೆ ಒಂದು ನಿರ್ಣಯಕ್ಕೆ ಬಂದು ಆ ರೀತಿ ಮಾಡಿ ಎಂದು ಹೇಳಿದರು. ಯಾರೇ ಆಗಲಿ ಕನ್ನಡ ನಾಡಿನಲ್ಲಿ ಸರ್ಕಾರಿ ಕೆಲಸಕ್ಕೆ ಅರ್ಜಿ ಹಾಕಿ ಅದರಲ್ಲಿ ಆಯ್ಕೆಯಾಗುತ್ತಾರೋ ಅಂತಹವರಿಗೆ ಕನ್ನಡ ಭಾಷೆ ಬಾರದಿದ್ದರೂ ಅಂತಹವರಿಗೆ ನಾಲ್ಕೈದು ತಿಂಗಳ ಅವಕಾಶವನ್ನು ಕೊಟ್ಟು ಅವರಿಗೆ ಕನ್ನಡವನ್ನು ಕಲಿಸತಕ್ಕದ್ದನ್ನು ಸರ್ಕಾರದ ವತಿಯಿಂದ ಮಾಡಿ ಎಂದರು. ಆಗ ಒಂದು ಸಿಂಪಲ್ ಎಕ್ಸಾಮಿನೇಷನ್ ಇಟ್ಟುಕೊಳ್ಳೋಣವೆಂದರು. ಇವತ್ತಿನ ದಿವಸ ಅನೇಕ ಸದಸ್ಯರಿಗೆ ಗೊತ್ತಿರಬಹುದು. ಈ ಕನ್ನಡ ಕಡ್ಡಾಯವಾಗಬೇಕೆಂದು ರಾಜ್ಯ ಸರ್ಕಾರದ ಪ್ರಕಾರ ಒಂದು ಆಜ್ಞೆ ಹೊರಟಿದೆ. ಕನ್ನಡ ಭಾಷೆಯಲ್ಲಿ ಟೆಸ್ಟ್ ಮಾಡಬೇಕೆಂದು ಏನಿದೆ. ಅದು ಯಾವ ತರಹದ ಟೆಸ್ಟ್, ಯಾವ ತರಹದ ಪರೀಕ್ಷೆ ಅಂದರೆ ಒಂದು ಪೇಪರ್ ಕನ್ನಡದಿಂದ ಇಂಗ್ಲೀಷ್‌ಗೆ ತರ್ಜುಮೆ ಮಾಡತಕ್ಕದ್ದು. ಮತ್ತೊಂದು ಪೇಪರ್ ಇಂಗ್ಲೀಷ್‌ನಿಂದ ಕನ್ನಡಕ್ಕೆ ತರ್ಜುಮೆ ಮಾಡುವುದು. ನಾನು ಕನ್ನಡ ಲೇಖಕರು, ಸಾಹಿತಿ ಮತ್ತು ಕಲಾವಿದರ ಬಳಗದವರಿಗೆ ಕೇಳಿದೆ, ಇದು ಕನ್ನಡ ಪರೀಕ್ಷೆಯೋ ಅಥವಾ ಇಂಗ್ಲೀಷ್ ಪರೀಕ್ಷೆಯೋ ಎಂದು. ಒಬ್ಬನಿಗೆ ಕನ್ನಡ ಬರುತ್ತದೆಂದು ಇಟ್ಟುಕೊಳ್ಳೋಣ, ನಾವು ಕನ್ನಡದ ಬಗ್ಗೆ ಇಷ್ಟೆಲ್ಲಾ ಮಾತನಾಡುತ್ತೇವೆ, ಅವನು ಸರ್ಕಾರದಲ್ಲಿ ಯಾವ ಕೆಲಸಕ್ಕೆ ಸೇರುತ್ತಾನೋ ಅಲ್ಲಿ ಇಂಗ್ಲೀಷ್ ಅವಶ್ಯಕತೆ ಇಲ್ಲ ಎಂದು ಇಟ್ಟುಕೊಳ್ಳೋಣ. ಈ ಪ್ರಶ್ನೆ ಮಟ್ಟಿಗೆ ಹೇಳುವುದಾದರೆ, ಅಲ್ಪ ಸಂಖ್ಯಾತರೇ ಅಲ್ಲ, ನೂರಕ್ಕೆ ನೂರರಷ್ಟು ಕನ್ನಡಿಗರು ಒಂದು ಸಾವಿರ ವರ್ಷದಿಂದ ಕನ್ನಡನಾಡಿನಲ್ಲಿ ಇದ್ದಾರೆ. ಅವರು ಇಂಗ್ಲೀಷ

ಕಲಿಯಲೇಬೇಕು ಎಂದು ನಿರ್ಬಂಧ ಏನಾದರೂ ಇದೆಯೇ ? ಕನ್ನಡದ ಹೆಸರಿನಲ್ಲಿ ಇಂಗ್ಲೀಷ್ ಜಾಸ್ತಿ ಟೆಸ್ಟ್ ಮಾಡುವುದಾದರೆ ಅದು ಕನ್ನಡಕ್ಕೆ, ಕನ್ನಡದ ಹಿತಕ್ಕೆ ಅಗತ್ಯ ಎಂದು ನಾನು ತಿಳಿದುಕೊಳ್ಳುವುದಿಲ್ಲ, ಇದನ್ನು ನಾನು ಹೇಳಿದಾಗ ಅವರು ಒಪ್ಪಿಕೊಂಡರು. ಅವರು ಒಂದು ವಿಚಾರ ಹೇಳಿದರು ಅದನ್ನೂ ನಾನು ಒಪ್ಪುತ್ತೇನೆ. ಸರಳ ಕನ್ನಡದ ಜ್ಞಾನ ಇರುವಂತೆ ಒಂದು ಟೆಸ್ಟ್ ಮಾಡಿ ಎಂದು ಅವರು ಹೇಳಿದರು. ಆ ಮಾತು ಕೇಳಿದೆ. ಕನ್ನಡ ನಾಡಿನಲ್ಲಿ ಸರ್ಕಾರಿ ನೌಕರಿಯಲ್ಲಿ ಕೆಲಸ ಮಾಡತಕ್ಕವರು ಯಾರೇ ಇರಲಿ, ಇದು ಎಲ್ಲರೂ ಒಪ್ಪತಕ್ಕ ಮಾತು. ಇದರಲ್ಲಿ ಭಿನ್ನಾಭಿಪ್ರಾಯಕ್ಕೆ ಎಡೆಯಿಲ್ಲ. ಪ್ರತಿಯೊಬ್ಬರಿಗೂ ಕನ್ನಡ ಭಾಷೆ ಬರಬೇಕು. ಮಾತನಾಡಲಿಕ್ಕೆ ಬರಬೇಕು. ಮತ್ತು ಅವನು ವಹಿಸಿಕೊಂಡಂಥ ಜವಾಬ್ದಾರಿ ಅಂಥಾದ್ದು, ಆದರೆ ಬರೆಯಲಿಕ್ಕೆ, ಓದಲಿಕ್ಕೆ ಬರಬೇಕು. ಇದರ ಬಗ್ಗೆ ಏನೇನೂ ಭಿನ್ನಾಭಿಪ್ರಾಯವಿಲ್ಲ. ಯಾರನ್ನು ನಾವು ನಾಲ್ಕನೇ ದರ್ಜೆ ನೌಕರರು ಎಂದು ಹೇಳುತ್ತೇವೆ. "ಡಿ" ವರ್ಗ ಎಂದು ಹೇಳುತ್ತೇವೆ. ಅಂತಹವರಿಗೆ ಕನ್ನಡ ಭಾಷೆ ಪಾಂಡಿತ್ಯ ಪ್ರದರ್ಶನ ಮಾಡತಕ್ಕ ಅಗತ್ಯ ಇಲ್ಲ. ಅವರಿಗೆ ಕನ್ನಡ ಮಾತನಾಡಲಿಕ್ಕೆ ಬೇಕು. ಕನ್ನಡದ ಬಗ್ಗೆ ಏನಾದರೂ ಸಣ್ಣಪುಟ್ಟ ವಿಷಯ ಇದ್ದರೆ, ಓದುವುದು, ಬರೆಯುವುದು ಬಂದರೆ ಸಾಕು. ಇನ್ನು (ಸಿ)ದರ್ಜೆ ನೌಕರರು ಆಫೀಸಿನಲ್ಲಿ ಕುಳಿತು ಕೆಲಸ ಮಾಡತಕ್ಕ ಪ್ರಮೇಯ ಇರುವುದರಿಂದ, ಬೇರೆ ಜವಾಬ್ದಾರಿ ಇರುವುದರಿಂದ, ಕನ್ನಡ ಭಾಷೆಯನ್ನು ಬಳಸತಕ್ಕ ಪ್ರಮೇಯ ಇರುವುದರಿಂದ, ಅವರಿಗೆ ಬರೆಯಲಿಕ್ಕೆ, ಓದಲಿಕ್ಕೆ ಸಾಕಷ್ಟು ಜ್ಞಾನ ಇರಬೇಕು ಇದನ್ನು ಒಪ್ಪಿಕೊಳ್ಳುತ್ತೇನೆ. ಈ ಚರ್ಚೆ ಆದ ಮೇಲೆ ಅವರು ಹೇಳಿದರು, ದಯವಿಟ್ಟು ಈ ಸೂಚನೆಯನ್ನು ನೀವು ಸ್ವೀಕರಿಸಿ ಎಂದು, ನಾನು ಹೇಳಿದೆ, ವೈಯುಕ್ತಿಕವಾಗಿ ನನ್ನದು ಏನೂ ಇಲ್ಲ, ಇದನ್ನು, ಮಂತ್ರಿಮಂಡಲದ ಸಂಪುಟದಲ್ಲಿಟ್ಟು ಚರ್ಚೆ ಮಾಡಬೇಕಾಗುತ್ತದೆ, ಇದರ ಬಗ್ಗೆ ಒಂದು ನಿರ್ಣಯ ತೆಗೆದುಕೊಳ್ಳುತ್ತೇವೆಂದು ಹೇಳಿದ್ದೇನೆ. ಪೇಪರ್‌ನಲ್ಲಿ ಯಾವ ರೀತಿ ವರದಿಯಾಗಿದೆಯೋ ನಾನು ನೋಡಲಿಲ್ಲ, ನಾನು ಎಲ್ಲಾ ಪೇಪರ್ ಓದಲಿಲ್ಲ. ನಿಜವಾದ ವಿಚಾರ ಇದು.

(xiii) ವಿಷಯ : ಬೆಳಗಾವಿ ನಗರವನ್ನು ಮಹಾರಾಷ್ಟ್ರದಲ್ಲಿ ವಿಲೀನಗೊಳಿಸಬೇಕೆಂದು ಬೆಳಗಾವಿ ನಗರಸಭೆಯವರು ನಿರ್ಣಯ ಮಾಡಿರುವ ವಿಚಾರ

ಶ್ರೀ ಪಿ. ರಾಂದೇವ್.—ಮಾನ್ಯ ಅಧ್ಯಕ್ಷರೇ, ಇಂದಿನ ಪತ್ರಿಕೆಯಲ್ಲಿ ಬೆಳಗಾವಿ ನಗರವನ್ನು ಮಹಾರಾಷ್ಟ್ರದಲ್ಲಿ ವಿಲೀನಗೊಳಿಸಬೇಕು ಎನ್ನತಕ್ಕ ನಿರ್ಣಯವನ್ನು ಬೆಳಗಾವಿ ಮಹಾನಗರ ಪಾಲಿಕೆ ಮಾಡಿರತಕ್ಕ ವಿಚಾರ ಬಂದಿದೆ. ಆ ನಗರಪಾಲಿಕೆ ಸ್ವತಂತ್ರವಾದ ನಗರಪಾಲಿಕೆ ಅಲ್ಲ. ಮಹಾನಗರಪಾಲಿಕೆಯವರು ಕಡ್ಡಾಯವಾಗಿ ಕನ್ನಡ ಕಲಿಯಬೇಕೆಂಬ ಸರಕಾರದ ಆಜ್ಞೆ ವಿರೋಧಿಸಿ ಗೊತ್ತುವಳಿ ಅಂಗೀಕರಿಸಿದ್ದಾರೆ. ಈ ಎರಡು ನಿರ್ಣಯಗಳು ಏನಿವೆ ಇವು ಅವರ ಕಾರ್ಯ ವ್ಯಾಪ್ತಿಗೆ ಮೀರಿರತಕ್ಕದ್ದು. ಮೊದಲನೆಯದು ಬೆಳಗಾವಿ ಮಹಾರಾಷ್ಟ್ರಕ್ಕೆ ಸೇರಬೇಕೆಂದು ಹೇಳಿರತಕ್ಕ ವಿಚಾರ. ರಾಜ್ಯ ಸರ್ಕಾರದ ನೀತಿಗೆ, ಈ ಸದನದ ನೀತಿಗೆ ವಿರೋಧವಾಗಿರತಕ್ಕ ಕೆಲಸ ಮಾಡಿದ್ದಾರೆ. ಇದು ರಾಜ್ಯಕ್ಕೆ ದ್ರೋಹ ಮಾಡಿದಂತಾಗುತ್ತದೆ. ಗಡಿ ಪ್ರಶ್ನೆ ಸೂಕ್ಷ್ಮವಾದ ವಿಚಾರ. ಒಂದು ಕಾರ್ಪೊರೇಷನ್ ಆಗಲಿ, ಒಂದು ಪಂಚಾಯತಿಯಾಗಲಿ, ಒಂದು ಭಾಷೆ ಜನ ಒಂದು ಜಾತಿ ಜನ ಇದ್ದರೆ ಅವರು ಆಯಾಯ ರಾಜ್ಯಗಳಿಗೆ ಸೇರತಕ್ಕದ್ದು ಎಂಬ ನಿರ್ಣಯ ಅಂಗೀಕರಿಸುವುದಾದರೆ ಅಂಥ ನಗರಪಾಲಿಕೆಗಳನ್ನು ರದ್ದು ಮಾಡುವುದು ಒಳ್ಳೆಯದು. ಅವರು ಕೊಟ್ಟಿರತಕ್ಕ ವ್ಯಾಪ್ತಿ ಬಿಟ್ಟು ಕೆಲಸ ಮಾಡತಕ್ಕಂಥಾದ್ದು ಆಗಬಾರದು. ಈಗ ಅವರು ಅಂಗೀಕರಿಸತಕ್ಕ ನಿರ್ಣಯವನ್ನು ರದ್ದು ಮಾಡಿ, ಅವರಿಗೆ ಷೋಕಾಸ್ ನೋಟೀಸ್ ಕೊಟ್ಟು, ಅವರು ಸರಿಯಾಗಿ ನಡೆದುಕೊಳ್ಳುವಂತೆ ಸರ್ಕಾರ ಎಚ್ಚರಿಕೆಯನ್ನು ಕೊಡಬೇಕು. ಸರ್ಕಾರ ಈ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತದೆ ಎಂದು ಕೇಳುತ್ತೇನೆ.

ಶ್ರೀ ಭೀಮಣ್ಣ ಖಂಡ್ರೆ—ಅಧ್ಯಕ್ಷರೇ, ನಮ್ಮ ರಾಜ್ಯದಲ್ಲಿ ನೀರಿನ ಪ್ರಶ್ನೆ ಹಾಗೂ ಇತರ ಬೇರೆ ಬೇರೆ ಮುಖ್ಯವಾದಂಥ ಪ್ರಶ್ನೆಗಳು ಇರುವಾಗ ಈ ಸಂಬಂಧದಲ್ಲಿ ಬಾರ್ಡರ್ ಪ್ರಶ್ನೆಯನ್ನು ಎತ್ತಿ ತಲೆ ಕೆಡಿಸುವುದು ಸರಿಯಲ್ಲ ಎಂದು ಹೇಳುತ್ತೇನೆ. ಬೆಳಗಾವಿ ಠರಾವು ಏನಿದೆ ಅದು ಕಾನೂನಿಗೆ ವಿರೋಧ ಇದೆ. ಇದು ರಾಜ್ಯಕ್ಕೆ ದ್ರೋಹ ಮಾಡಿದ ರೀತಿ ಇದೆ. 1956ರ ನವೆಂಬರ್ ಅನಂತರ ಇದರ ಬಗ್ಗೆ ಒಂದೊಂದು ತಿಂಗಳು ಪಾರ್ಲಿಮೆಂಟಿನಲ್ಲಿ ಚರ್ಚೆಯಾಗಿ ಅನಂತರ ಮಹಾಜನ್ ಕಮಿಷನ್ ಬಂತು. ಆಗ ಅವರು ಅದನ್ನು ಒಪ್ಪಿದರು. ಈಗ ಇಷ್ಟೆಲ್ಲಾ ಮಾಡಲಿಕ್ಕೆ ಕಾರಣ ಏನು ? ಇವೊತ್ತು ಮುಖ್ಯ ಮಂತ್ರಿಗಳು ರಾಜ್ಯಪಾಲರ ಭಾಷಣದಲ್ಲಿ ಈ ವಿಷಯವನ್ನು ಪ್ರಸ್ತಾಪ ಮಾಡಿ ಪ್ರಚೋದನೆ ಮಾಡಿದ್ದಾರೆ. ಶಿವಸೇನೆಯವರು ಶೋಲಾಪುರದಲ್ಲಿ ಕನ್ನಡ ಶಾಲೆಗಳನ್ನು ನಡೆಯಲು ಬಿಡುವುದಿಲ್ಲ ಎನ್ನುವ ಮಾತನ್ನು ಹೇಳುತ್ತಿದ್ದಾರೆ. ಇವೊತ್ತು ಲೆಜಿಸ್ಲೇಟರ್ಸ್, ಕೌನ್ಸಿಲರ್ಸ್, ಎಂ. ಎಲ್. ಸಿ. ಅವರು ಒಂದೊಂದು ಸ್ಟೇಟ್‌ಮೆಂಟ್ ಕೊಡುತ್ತಿದ್ದಾರೆ. ಈಗ ನಗರಪಾಲಿಕೆಯವರು ಈ ರೀತಿ ಠರಾವು ಮಾಡಿದ್ದಾರೆ. 1956ರ ನಂತರ ಈವರೆಗೆ ಎಷ್ಟು ಎಲೆಕ್ಷನ್‌ಗಳು ಆಗಿವೆ, ಅಸೆಂಬ್ಲಿ ಎಲೆಕ್ಷನ್ ಎಷ್ಟು ಆಗಿವೆ. ಈಗ ನಾಲ್ಕಾರು ಪಾರ್ಟಿಗಳು ಇರುತ್ತವೆ, ಅದರಲ್ಲಿ ಒಬ್ಬರು ಇಂಡಿಪೆಂಡೆಂಟ್ ಬಂದಾಗ, ಆಗ ಅದಕ್ಕೆ